# ಯಾವಾಗಲು ಹೇಳಬಾರದೆ, ವಾಸುದೇವನೆ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 488.
2. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 367.
3. **Note:** This song is not available in the books of Shri Betageri Krishna Sharma and Shri Bengeri Huchha Rayaru and also in the books of Prof. S.K. Ramachandra Rao and also in the books of Samagra Dasa Sahitya, published by Kannada & Culture Dept., Govt of Karnataka, Bengaluru and also in the books of Sri. Pavanje Guru Rao and also in the books of Gorebala Hanumantha Rayaru.
4. **Note:** Lyrics given here are as per Ref. 1. The wordings in Ref. 2 are same as in Ref. 1 except the Ankita.
5. **Note:** Ankita is different in both the books. We have considered Ref.1 as standard and taken that Ankita for listing.
6. **Note:** Singer has followed these lyrics.

ರಾಗ: ಆರಭಿ ತಾಳ: ಅಟ

ಯಾವಾಗಲು ಹೇಳಬಾರದೆ, ವಾಸು-
ದೇವನೆ ಕೈ ಬಿಡಬೇಡವೆಂದೆನುತಲಿ || ಪ ||

ಇಕ್ಕಿ ಎರೆವರಿಲ್ಲ, ಇಷ್ಟ ಬಂಧುಗಳಿಲ್ಲ
ಅಕ್ಕತಂಗಿಯರಣ್ಣ ತಮ್ಮರಿಲ್ಲ
ಒಕ್ಕಟಿಯಾಗಿ ನಾ ಬಳಲುತ್ತಲಿ ಸದಾ
ದುಃಖಪಡುವೆನೆಂದು ರಕ್ಕಸಾಂತಕನೊಳು || 1 ||

ಮಡದಿ ಮಕ್ಕಳು ಇಲ್ಲ, ಒಡವೆ ವಸ್ತುಗಳಿಲ್ಲ
ಪಡೆದ ತಾಯಿತಂದೆಯೊಬ್ಬರಿಲ್ಲ
ಎಡವಿ ಬೀಳುತಲಿರೆ ಎತ್ತಿಕೊಂಬುವರಿಲ್ಲ

ಒಡೆಯನೆ ಕೈ ಬಿಡಬೇಡವೆಂದೆನುತಲಿ || 2 ||

ಮಾಡಿಟ್ಟ ಮನೆಯಿಲ್ಲ ಕೂಡಿಟ್ಟ ಧನವಿಲ್ಲ
ಆಡಿಸಿಕೊಳ್ಳಲು ಮಕ್ಕಳಿಲ್ಲ
ಪಾಡಿ ನಿನ್ನನು ಸ್ತುತಿ ಮಾಡುವೆನೆಂದರೆ
ಮೂಢರೊಳಗೆ ಬಲು ಮೂಢನಾಗಿಹೆನೆಂದು || 3 ||

ಇಷ್ಟರ ಮೇಲೆ ಕೈ ಬಿಟ್ಟೆಯಾದರೆ, ಇನ್ನು
ಶಿಷ್ಟರು ನೋಡಿ ನಗದಿಹರೆ
ಇಷ್ಟಾರ್ಥ ಕೊಡುವಂಥ ದೇವನಲ್ಲವೆಂದು
ಸೃಷ್ಟಿಯೊಳಪಕೀರ್ತಿ ತಟ್ಟದೆ ಇರದೆಂದು || 4 ||

ಮೋಕ್ಷದಾಯಕ ವಿಶ್ವರೂಪ ವಿಶ್ವಾತ್ಮಕ
ಸಾಕ್ಷಿಸ್ವರೂಪ ಸರ್ವೇಶ್ವರನೆ
ಸಾಕ್ಷಾತು ಶ್ರೀ ಗುರು ಪುರಂದರ ವಿಠಲನೆ
ರಕ್ಷಿಸಬೇಕೆಂದು ಲಕ್ಷ್ಮೀವಲ್ಲಭನೊಳು || 5 ||

**Classification:** Keerthane
**Ankita:** Sri Guru Purandara Vittala
**Location:** NA
**Category:** Binnaha, Virakti
**Sub-Category:** koti, daari, janma, handi, samsara, patni, hendati, loka, koNa, goobe, hanuma, gaja, virakti,
**Pravachana:** NA
**Explanation:** NA